**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 522/2023**

**ಪಿರ್ಯಾದುದಾರರು** ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

**-ವಿರುದ್ಧ-**

**ಆರೋಪಿ/ತರು** ಃ ರವಿಕುಮಾರ ಎ.ಜೆ. ಬಿನ್ ಲೇಟ್ ಜವರಪ್ಪ, 36 ವರ್ಷ, ಚಾಲಕ, ವಾಸಃ2 ನೇ ಕ್ರಾಸ್, ಸುಭಾಷನಗರ, ಅರಿಸೀಕೆರೆ ಟೌನ್, ಹಾಸನ ಜಿಲ್ಲೆ.

**-ಃಆಪಾದನೆಃ-**

ದಿನಾಂಕಃ03.10.2022 ರಂದು ರಾತ್ರಿ 22-45 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ತರೀಕೆರೆ ಟೌನ್ ಎನ್ ಹೆಚ್ 206 ಹೆದ್ದಾರಿಗೆ ಹೊಂದಿಕೊಂಡಿರುವ ಅರಣ್ಯ ಇಲಾಖೆಯ ಗೇಟ್ ನ ಮುಂಭಾಗದಲ್ಲಿ ಚಾಸಾ-1 ರವರ ಮಗ ಚಾಸಾ- 10 ರವರೊಂದಿಗೆ ಚಾಸಾ-1 ರವರ ಬಾಬ್ತು ಹಿರೋ ಸ್ಪೇಂಡರ್ ಪ್ಲಸ್ ದ್ವಿಚಕ್ರ ವಾಹನ ಸಂಖ್ಯೆಃಕೆಎ-66/ಕೆ-4082 ನ್ನು ಚಲಾಯಿಸಿಕೊಂಡು ಬರುತ್ತಿರುವಾಗ ಆ ಸಮಯದಲ್ಲಿ ಭದ್ರಾವತಿ ಕಡೆಯಿಂದ ತರೀಕೆರೆ ಕಡೆಗೆ ಆರೋಪಿಯಾದ ನೀವು ನಿಮ್ಮ ಬಾಬ್ತು ಅಶೋಕ ಲೈಲ್ಯಾಂಡ್ ದೋಸ್ತ್ ಗೂಡ್ಸ್ ವಾಹನ ಸಂಖ್ಯೆಃಕೆಎ-13/ಡಿ-3265 ನ್ನು ದುಡುಕು ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಬೈಕಿಗೆ ಡಿಕ್ಕಿಯನ್ನುಂಟು ಮಾಡಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.279** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ

ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿದ ಪರಿಣಾಮ ಚಾಸಾ-10 ರವರ ಬಲಕಾಲಿಗೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.337, 338** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿದ ಪರಿಣಾಮ ಸದರಿ ಬೈಕ್ ಚಲಾಯಿಸುತ್ತಿದ್ದ ಚಾಸಾ-1 ರವರ ಮಗ ತೇಜಸ್ ರವರಿಗೆ ತಲೆಗೆ ಪೆಟ್ಟಾಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ದಿಃ03.10.2022 ರಂದು ಮೃತಪಟ್ಟಿರುತ್ತಾರೆ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.304-ಎ** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?

ಉತ್ತರಃ

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿ ವಿವರಿಸಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ.)

ದಿನಾಂಕಃ

Sd/-
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ

ಆರೋಪಿಯ ಸಹಿಃ